# ಮಹಿಳಾ ಕವಿಗಳು

ಮಹಿಳಾ ಕವಿಗಳು ತಮ್ಮ ನಿದ್ರೆಯಲ್ಲಿ ನಡೆಯುತ್ತಾರೆ
ದೂರ ದೂರದ ದೇಶಗಳಿಂದ ನನ್ನ ಬೆಡ್ರೂಮಿನ ತನಕ
ನನ್ನ ಕಾಲ್ಪನಿಕ ಜಡೆಯನ್ನು ಹಿಡಿದೆಳೆಯುತ್ತಾರೆ
ಮಂದ ಬೆಳಕಿನಲಿ ನಾನು
ಅವರ ಅಂಗೈಗಳನು ಬಿಚ್ಚಿ ಓದುವ ತನಕ

ಮದುವೆಯನೇ ಆರಿಸಿಕೊಂಡರು ಕವಯಿತ್ರಿಯರು
ಮತ್ತು ಕೆಲ ತರುಣಿಯರು ಆತ್ಮಹತ್ಯೆ
ಆಳದ ಗಾಯಗಳ ಬಲು ಎಚ್ಚರಿಕೆಯಿಂದ ಮರೆಮಾಚಿ
ಅನಂತರ ಅವರು ತೆರೆದ ಸ್ತನಗಳೊಂದಿಗೆ
ತಮ್ಮ ಜೀವನ ಗಾಥೆಯನೇ ಬರೆದರು

ನನ್ನ ಒಳ ಕೋಣೆಗೆ ಅವರು
ಚಂಡಮಾರುತದಂತೆ ಬಂದು ಅಪ್ಪಳಿಸಿದಾಗ
ಭಯಾನಕ ಕಾಡಿನ ನಡುವೆ
ಇಲಿ ಬಿಲದಂತೆ ನಾನು
ನನ್ನ ಮುಖವ ಮರೆಸಿಕೊಂಡೆ

ಒಂದಕ್ಕೊಂದು ಹೊಸೆದು ನಿಂತ
ನೂರಾರು ನಾಜೂಕು ಕೈಗಳಿಂದ
ನನ್ನ ಮುಖವ ಮತ್ತೆ ಮುಚ್ಚಿಕೊಂಡೆ

ಅವರ ಬೆರಳುಗಳ ನಡುವಿನ ಬಿರುಕಿನಲಿ ಕಂಡೆ
ನಮ್ಮದಾಗಬಹುದಾದ ಈ ಲೋಕವ



ಕಲೆ: ನಂಜುಂಡಸ್ವಾಮಿ

# ಮಿಂಚು

ಗೆಳತಿ
ಮಿಂಚು ಕೂಡ
ಹಠಾತ್ತನೆ ಎರಗುತ್ತದೆ

ನಿನ್ನ ಪಾಲಿನ ಕತ್ತಲನ್ನ
ಒಡಿಸದಿದ್ದರೆ ಅದು
ನಿನ್ನನ್ನೇ ಎರಡಾಗಿ ಸೀಳುತ್ತದೆ